# ನಡಾವಳಿ ಮತ್ತು ನೈತಿಕತೆ ನೀತಿ
# ಆಂತರಿಕ ನೈತಿಕತೆ ತನಿಖಾ ನೀತಿ

ETHICS & LEGAL COMPLIANCE | ISSUED: September 21, 2021 – REVISED: April 3, 2024ಪರಿಚಯ

ಮ್ಯಾಗ್ನ ಇಂಟರ್‌ನ್ಯಾಶನಲ್ ಇಂಕ್. ಮತ್ತು ಅದರ ಎಲ್ಲಾ ಕಾರ್ಯಾಚರಣ ಗುಂಪು, ವಿಭಾಗ, ಜಂಟಿ ಉದ್ಯಮಗಳು ಹಾಗೂ ಅದರ ಇತರ ಜಾಗತಿಕ ಕಾರ್ಯಾಚರಣೆಗಳಲ್ಲಿ (ಒಟ್ಟಾರೆಯಾಗಿ "ಮ್ಯಾಗ್ನದಲ್ಲಿ) ನೈತಿಕತೆ ಮತ್ತು ಕಾನೂನು ಅನುಸರಣೆ ಕಳಕಳಿಗಳನ್ನು ಹೇಗೆ ನಿರ್ವಹಿಸಲಾಗುತ್ತದೆ ಎಂಬುದನ್ನು ಈ ನೀತಿ ವಿವರಿಸುತ್ತದೆ. ಈ ನೀತಿ ಮ್ಯಾಗ್ನ ಪರವಾಗಿ ಕಾರ್ಯನಿರ್ವಹಿಸುವ ಎಲ್ಲಾ ವ್ಯಕ್ತಿಗಳಿಗೆ ಅಂದರೆ ಉದ್ಯೋಗಿ, ಸ್ವತಂತ್ರ ಗುತ್ತಿಗೆದಾರ, ಅಧಿಕಾರಿ, ನಿರ್ದೇಶಕರ, ಪೂರೈಕೆದಾರ, ಸಲಹೆಗಾರ ಮತ್ತು ಏಜೆಂಟರು (ಒಟ್ಟಾರೆಯಾಗಿ "ಮ್ಯಾಗ್ನ ವ್ಯಕ್ತಿಗಳಿಗೆ") ಸೇರಿದಂತೆ ಎಲ್ಲರಿಗು ಅನ್ವಯವಾಗುತ್ತದೆ.

ಉದ್ಯೋಗಿಗಳು, ಸ್ವತಂತ್ರ ಗುತ್ತಿಗೆದಾರರು, ಅಧಿಕಾರಿಗಳು, ನಿರ್ದೇಶಕರು, ಪೂರೈಕೆದಾರರು, ಸಲಹೆಗಾರರು ಮತ್ತು ಏಜೆಂಟ್‌ಗಳು (ಒಟ್ಟಾರೆ, "ಮ್ಯಾಗ್ನಾ ವ್ಯಕ್ತಿಗಳು") ಸೇರಿದಂತೆ ಮ್ಯಾಗ್ನಾ ಜೊತೆಗೆ ಸಂಬಂಧ ಹೊಂದಿರುವ ಅಥವಾ ಮ್ಯಾಗ್ನಾ ಪರವಾಗಿ ಕಾರ್ಯನಿರ್ವಹಿಸುವ ಎಲ್ಲ ವ್ಯಕ್ತಿಗಳಿಗೆ ಈ ನೀತಿ ಅನ್ವಯಿಸುತ್ತದೆ.

## ಅನ್ವಯ

ಈ ನೀತಿ ನೈತಿಕತೆ ಮತ್ತು ಕಾನೂನು ಅನುಸರಣೆ ಕಳಕಳಿಗಳ ಬಗೆಗಿನ ಸ್ವೀಕೃತ ವರದಿಗಳಿಗೆ ಅನ್ವಯವಾಗುತ್ತದೆ. ಈ ನೀತಿಯು ಮ್ಯಾಗ್ನದ ಉದ್ಯೋಗಿ ಚಾರ್ಟರ್ ಅಥವಾ ಮಾನವ ಸಂಪನ್ಮೂಲ ಅಥವಾ ಆರೋಗ್ಯ, ಭದ್ರತೆ ಮತ್ತು ಪರಿಸರಕ್ಕೆ ಸಂಬಂಧಪಟ್ಟ ಇತರ ಸ್ಥಳೀಯ ವಿಷಯಗಳ ಸಂಭಾವ್ಯ ಉಲ್ಲಂಘನೆಗಳ ಕುರಿತಾದ ಕಳಕಳಿಗಳ ವರದಿಗೆ ಅನ್ವಯಿಸುವುದಿಲ್ಲ. ಸಾಮಾನ್ಯವಾಗಿ ಅವುಗಳನ್ನು ಸ್ಥಳೀಯ ಕಾನೂನು ಮತ್ತು ಅಭ್ಯಾಸಗಳಿಗೆ ಅನುಗುಣವಾಗಿ ತನಿಖೆ ಮಾಡಲಾಗುತ್ತದೆ.

ಈ ನೀತಿ ಮತ್ತು ಅನ್ವಯಿಸುವ ಯಾವುದೇ ಕಾನೂನಿನ ನಡುವೆ ಯಾವುದೇ ರೀತಿಯ ಗೊಂದಲ ಏರ್ಪಟ್ಟಾಗ, ಕಾನೂನಿನ ಅವಶ್ಯಕತೆಗಳ ಪಾಲನೆಯಾಗುತ್ತವೆ.

## ಬದ್ಧತೆ

ಎಲ್ಲಾ ವ್ಯಾಪಾರ ವ್ಯವಹಾರಗಳಲ್ಲಿ ಮ್ಯಾಗ್ನ ನ್ಯಾಯಯುತವಾಗಿ ಮತ್ತು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಲು ಬದ್ಧವಾಗಿದೆ. ಆದ್ದರಿಂದ, ಎಲ್ಲಾ ಮ್ಯಾಗ್ನ ವ್ಯಕ್ತಿಗಳು ಕೂಡ***ತಕ್ಷಣವೇ ಮಾತನಾಡಬೇಕು*** ಮತ್ತು ನಡಾವಳಿ ಮತ್ತು ನೈತಿಕತೆ ನೀತಿಯ ("ನೀತಿ") ಅಥವಾ ನೀತಿಗೆ ಸಂಬಂಧಿಸಿದ ಯಾವುದೇ ಪಾಲಿಸಿಗಳ ಸಂಭಾವ್ಯ ಉಲ್ಲಂಘನೆಗಳ ಬಗ್ಗೆ ಯಾವುದೇ ಕಳಕಳಿಯನ್ನು ವರದಿ ಮಾಡಬೇಕು. ಲಭ್ಯವಿರುವ ವರದಿ ಮಾಡುವ ಚಾನಲ್‌ಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಕೆಳಗೆ ನೋಡಿ.

ಮ್ಯಾಗ್ನ ವರದಿ ಮಾಡಿದ ಕಳಕಳಿಗಳನ್ನು ಗಂಭೀರವಾಗಿ ಪರಿಗಣಿಸುತ್ತದೆ ಮತ್ತು ತನಿಖೆಯಿಂದ ಗೊತ್ತಾದ ಯಾವುದೇ ದುರ್ವರ್ತನೆಯನ್ನು ಸಮಯೋಚಿತ, ನ್ಯಾಯೋಚಿತ ಮತ್ತು ಸ್ಥಿರವಾದ ರೀತಿಯಲ್ಲಿ ತನಿಖೆ ಮಾಡಲು ಹಾಗೂ ಸರಿಪಡಿಸಲು ಬದ್ಧವಾಗಿದೆ.

ಪ್ರತೀಕಾರದ ಭಯವಿಲ್ಲದೆ ಅಂತಹ ಕಳಕಳಿಗಳನ್ನು ಎತ್ತಿ ತೋರಿಸುವ ಸಂಸ್ಕೃತಿಯನ್ನು ಬೆಂಬಲಿಸಲು Magna ಕೂಡ ಬದ್ಧವಾಗಿದೆ. ಅದೇ ಕಾರಣಕ್ಕೆ, ಮ್ಯಾಗ್ನದ ಪ್ರತೀಕಾರ ವಿರೋಧಿ ನೀತಿಯು ಪ್ರಾಮಾಣಿಕವಾಗಿ ಮತ್ತು ಒಳ್ಳೆಯ ಉದ್ದೇಶದಿಂದ ಕಳಕಳಿಯನ್ನು ವ್ಯಕ್ತಪಡಿಸುವ ಯಾರ ವಿರುದ್ಧವೂ ಪ್ರತೀಕಾರವನ್ನು ನಿಷೇಧಿಸುತ್ತದೆ. ಕಳಕಳಿ ವ್ಯಕ್ತಪಡಿಸುವಿಕೆಯನ್ನು ಯಾರಾದರೂ ಬೆಂಬಲಿಸದಿದ್ದರೆ ಅಥವಾ ತಡೆಯುವ ಪ್ರಯತ್ನವನ್ನು ಮಾಡಿದರೆ, ಅಂತದನ್ನು ಸಹಿಸಲಾಗುವುದಿಲ್ಲ ಹಾಗೂ ಪ್ರತೀಕಾರದ ಯಾವುದೇ ಸಂಗತಿಯನ್ನು ಗಂಭೀರ ವಿಷಯವೆಂದು ಪರಿಗಣಿಸಲಾಗುವುದು ಮತ್ತು ಉದ್ಯೋಗದಿಂದ ವಜಾ ಮಾಡುವುದನ್ನು ಸೇರಿದಂತೆ ಶಿಸ್ತು ಕ್ರಮವನ್ನು ಜರುಗಿಸಬಹುದಾಗಿದೆ.

## ಮ್ಯಾಗ್ನ ವ್ಯಕ್ತಿಗಳ ಜವಾಬ್ದಾರಿಗಳು

ಕೆಳಗೆ ತಿಳಿಸಲಾದ ವಿವಿಧ ವರದಿ ಮಾಡುವ ಮೂಲಗಳಲ್ಲಿ ಒಂದನ್ನು ಆರಿಸಿಕೊಂಡು ಯಾವುದೇ ಶಂಕಿತ ನೈತಿಕತೆ ಅಥವಾ ಕಾನೂನು ಅನುಸರಣೆ ಉಲ್ಲಂಘನೆಗಳನ್ನು ಮ್ಯಾಗ್ನ ವ್ಯಕ್ತಿಗಳು ತ್ವರಿತವಾಗಿ ವರದಿ ಮಾಡಬೇಕು. ವರದಿಗಳು ನಡವಳಿಕೆಯ ವಿವರವಾದ ಚಿತ್ರಣವನ್ನು ಒಳಗೊಂಡಂತೆ ಕಳಕಳಿಯ ಕುರಿತಾದ ಸಾಧ್ಯವಾದಷ್ಟು ಮಾಹಿತಿಯನ್ನು ಹೊಂದಿರಬೇಕು; ಸ್ಥಳ, ದಿನಾಂಕ ಮತ್ತು ನಡವಳಿಕೆಯ ಸಮಯ (ಇದು ನಡೆಯುತ್ತಿದೆಯೇ ಎಂಬುದನ್ನು ಒಳಗೊಂಡಂತೆ) ಅದರಲ್ಲಿ ಅಡಕವಾಗಿರಬೇಕು; ದೈಹಿಕ ಹಾನಿ, ಸುರಕ್ಷತೆ ಅಥವಾ ಭದ್ರತೆಗೆ ಲೋಪ[1],ಅಥವಾ ತಕ್ಷಣದ ಕ್ರಮಕ್ಕೆ ಇತರ ಕಾರಣಗಳು ಇದ್ದರೆ ಅವು ಇರಬೇಕು; ಜೊತೆಗೆ ಮ್ಯಾಗ್ನದ ತನಿಖೆಯನ್ನು ಮುಂದುವರಿಸಲು ಸಹಾಯ ಮಾಡುವಂತ ಸಂಬಂಧಪಟ್ಟ ಸಾಕ್ಷಿ ಅಥವಾ ಇತರ ವ್ಯಕ್ತಿಗಳ ಗುರುತುಗಳು; ಹಾಗೂ ಮಾಹಿತಿ, ದಾಖಲೆ ಅಥವಾ ಪುರಾವೆಗಳ ಮೂಲಗಳು.ಇರಬೇಕು. ತಮ್ಮ ಕ್ಲೈಮ್‌ಗಳಿಗೆ ಬೆಂಬಲವಾಗಿ ಹೆಚ್ಚುವರಿ ಮಾಹಿತಿ ಮತ್ತು ಸಾಕ್ಷಿಯನ್ನು ನೀಡಬೇಕೆಂಬ ಯಾವುದೇ ವಿನಂತಿಗೆ ವರದಿ ಮಾಡಿದವರು ತಕ್ಷಣ ಪ್ರತಿಕ್ರಿಯಿಸಬೇಕು. ಸಕಾಲಿಕ ಸಹಕಾರವನ್ನು ನೀಡಲು ವಿಫಲವಾದರೆ ಅಥವಾ ಮಾಹಿತಿಗಾಗಿ ತನಿಖಾ ವಿನಂತಿಗಳಿಗೆ ಪ್ರತಿಕ್ರಿಯಿಸಲು ವಿಫಲವಾದರೆ ತನಿಖಾ ಫೈಲ್ ಅನ್ನು ಮುಚ್ಚಬಹುದು.

ಆಪಾದಿತ ಉಲ್ಲಂಘನೆಗಳ ಬಗೆಗಿನ ತನಿಖೆಗೆ ಮ್ಯಾಗ್ನ ವ್ಯಕ್ತಿಗಳು ವಿನಂತಿಸಿಕೊಂಡಾಗ ಸಹಕಾರ ನೀಡಬೇಕು. ಸಂಪೂರ್ಣ ಅಥವಾ ಸಮಯಕ್ಕೆ ಸರಿಯಾಗಿ ಸಹಕಾರ ನೀಡಲು ಮ್ಯಾಗ್ನಾ ತನಿಖಾಧಿಕಾರಿಗಳೊಂದಿಗೆ, ಅಥವಾ ತನಿಖೆಯಲ್ಲಿ ಹಸ್ತಕ್ಷೇಪ ಮಾಡುವ ಅಥವಾ ದುರ್ಬಲಗೊಳಿಸುವ ಯಾವುದೇ ಪ್ರಯತ್ನಗಳಿಗೆ ಒಪ್ಪದ ಉದ್ಯೋಗಿಯನ್ನು ಕೆಲದಿಂದಲೇ ವಜಾ ಮಾಡಬಹುದು, ಜೊತೆಗೆ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಬಹುದು. ಸ್ವತಂತ್ರ ಗುತ್ತಿಗೆದಾರ, ಪೂರೈಕೆದಾರ ಅಥವಾ ಏಜೆಂಟರು ಸಹಕರಿಸಲು ನಿರಾಕರಿಸಿದರೆ, ಮ್ಯಾಗ್ನ ಜೊತೆಗಿನ ಅವರ ವಾಣಿಜ್ಯ ಸಂಬಂಧವನ್ನು ಕೊನೆಗೊಳಿಸಬೇಕಾಗಬಹುದು.

## ವರದಿ ನೀಡುವ ದಾರಿಗಳು

ಮ್ಯಾಗ್ನಾ ವ್ಯಕ್ತಿಗಳು ಶಂಕಿತ ಉಲ್ಲಂಘನೆಗಳನ್ನು ಆಂತರಿಕವಾಗಿ ವರದಿ ಮಾಡಬೇಕು ಮತ್ತು ವಿವಿಧ ವರದಿ ಮಾಡುವ ಚಾನೆಲ್‌ಗಳು ಲಭ್ಯವಿವೆ. ಮ್ಯಾಗ್ನ ಹಾಟ್‌ಲೈನ್ ಆ ರೀತಿಯ ಒಂದು ದಾರಿಯಾಗಿದ್ದು, ಆ ಮೂಲಕ ಪ್ರತೀಕಾರದ ಭಯವಿಲ್ಲದೆ ಮ್ಯಾಗ್ನ ಪಾಲಿಸಿಗಳ ಉಲ್ಲಂಘನೆಗಳ ಬಗ್ಗೆ ಗೌಪ್ಯವಾಗಿ ಮತ್ತು ಹೆಸರು ಗೊತ್ತುಪಡಿಸದೆ ವರದಿ ಮಾಡಲು ಮ್ಯಾಗ್ನ ವ್ಯಕ್ತಿಗಳಿಗೆ ಅವಕಾಶ ನೀಡುತ್ತದೆ. ಉದ್ಯೋಗಿಗಳು ವರದಿಗಳನ್ನು ಅವರ ಮೇಲ್ವಿಚಾರಕರನ್ನು ಒಳಗೊಂಡಂತೆ ಮತ್ತು/ಅಥವಾ ಇತರ ಡಿವಿಷನ್, ಗ್ರೂಪ್ ಅಥವಾ ಕಾರ್ಪೊರೇಟ್ ಹಂತಗಳಲ್ಲಿ ತಮ್ಮ ಮೇಲ್ವಿಚಾರಕರು ಮತ್ತು/ಅಥವಾ ಮ್ಯಾಗ್ನಾ ಮ್ಯಾನೇಜ್‌ಮೆಂಟ್‌ನ ಸದಸ್ಯರಿಗೆ (ಅಂದರೆ ಮ್ಯಾಗ್ನದ "ಓಪನ್ ಡೋರ್" ಪ್ರಕ್ರಿಯೆ ಮುಖಾಂತರ) ಮ್ಯಾಗ್ನದ ಆಂತರಿಕ ಲೆಕ್ಕಪರಿಶೋಧನೆ, ಕಾನೂನು, ಮಾನವ ಸಂಪನ್ಮೂಲಗಳು, ಅಥವಾ ನೈತಿಕತೆ ಮತ್ತು ಕಾನೂನು ಅನುಸರಣೆ ಇಲಾಖೆಗಳಿಗೆ ನೇರವಾಗಿ ಇತರ ದಾರಿಗಳ ಮುಖೇನ ಕಳಕಳಿಗಳನ್ನು ವರದಿ ಮಾಡಬಹುದಾಗಿದೆ.

ಕೆಲವು ದೇಶಗಳಲ್ಲಿ, ಉಲ್ಲಂಘನೆಗಳನ್ನು ಸರ್ಕಾರಿ ಅಥವಾ ನಿಯಂತ್ರಕ ಏಜೆನ್ಸಿಯ ವಿಷಲ್-ಬ್ಲೋಯಿಂಗ್ ಕಾರ್ಯವಿಧಾನದ ಮೂಲಕ ಬಾಹ್ಯವಾಗಿ ವರದಿ ಮಾಡಬಹುದು. ನಿಮ್ಮ ತಾಯ್ನಾಡಿನಲ್ಲಿ ಕಾನೂನಿನಿಂದ ಅನುಮತಿಸಲಾದ ನಿಯಂತ್ರಕರ ವಿಷಲ್-ಬ್ಲೋಯಿಂಗ್ ಕಾರ್ಯವಿಧಾನವನ್ನು ಬಳಸುವುದರಿಂದ ಈ ನೀತಿಯಲ್ಲಿ ಯಾವುದೂ ನಿಮ್ಮನ್ನು ತಡೆಯುವುದಿಲ್ಲ.

---

[1] ಈ ರೀತಿಯ ತುರ್ತು ಸಂದರ್ಭಗಳಲ್ಲಿ, ಮ್ಯಾಗ್ನ ತನ್ನ ಉದ್ಯೋಗಿ, ಸ್ವತಂತ್ರ ಗುತ್ತಿಗೆದಾರ, ಅಧಿಕಾರಿಗಳು, ನಿರ್ದೇಶಕರು, ಪೂರೈಕೆದಾರ ಮತ್ತು ಏಜೆಂಟರಿಗೆ ಸ್ಥಳೀಯ ತುರ್ತು ಸೇವೆಗಳನ್ನು ಸಂಪರ್ಕ ಮಾಡಲು ಅವಕಾಶ ಮಾಡಿಕೊಡುತ್ತದೆ (ಉದಾಹರಣೆಗೆ ಲಭ್ಯವಿರುವಲ್ಲಿ 911 ಗೆ ಕರೆ ಮಾಡುವುದು).

## ಖಾಸಗಿತನ, ಗೌಪ್ಯತೆ, ಸವಲತ್ತು ಮತ್ತು ಹೆಸರನ್ನು ತಿಳಿಸದೆ

ವರದಿಗಾರರ ಗೌಪ್ಯತೆ ಕಾಪಾಡುವುದು ಮತ್ತು ಹೆಸರನ್ನು ತಿಳಿಸದೆ ಇರುವುದು ಹಾಗೂ ನಮಗೆ ಅವರ ಬಗ್ಗೆ ತಿಳಿದಿದ್ದರೆ, (ಹಾಗೆಯೇ ತನಿಖೆಯಲ್ಲಿ ತೊಡಗಿರುವ ಇತರ ವ್ಯಕ್ತಿಗಳ ಗುರುತುಗಳು) ಅಂತವರ ಗುರುತುಗಳ ರಕ್ಷಣೆ ಹೆಚ್ಚಿನ ಆದ್ಯತೆ ಇರುವಂತದ್ದಾಗಿದೆ. ಅನ್ವಯವಾಗುವ ಕಾನೂನು ಅವಶ್ಯಕತೆಗಳು ಬೇಡದ ಹೊರತಾಗಿ ವರದಿಗಾರರ ಗೌಪ್ಯತೆ ಕಾಪಾಡುವುದನ್ನು ಮತ್ತು ಹೆಸರನ್ನು ತಿಳಿಸದೆ ಇರುವುದನ್ನು ಗೌರವಿಸಲಾಗುತ್ತದೆ.[2] ತನಿಖಾ ಪ್ರಕ್ರಿಯೆಯ ಭಾಗವಾಗಿರುವ ವರದಿಗಾರರು ಮತ್ತು ಇತರ ವ್ಯಕ್ತಿಗಳ ವೈಯಕ್ತಿಕ ಡೇಟಾವನ್ನು ಅನ್ವಯವಾಗುವ ಕಾನೂನು ಮತ್ತು ನಮ್ಮ ಆಂತರಿಕ ನೀತಿ, ಕಾರ್ಯವಿಧಾನಗಳು ಮತ್ತು ಡೇಟಾ ಗೌಪ್ಯತೆಯ ಮಾರ್ಗಸೂಚಿಗಳಿಗೆ ಅನುಗುಣವಾಗಿ ಪ್ರೊಸೆಸ್ ಮಾಡಲಾಗುತ್ತದೆ.

ಮ್ಯಾಗ್ನ ತನಿಖಾ ಪ್ರಕ್ರಿಯೆಯಲ್ಲಿ ಮತ್ತು ಸಂಬಂಧಿತ ಮಾತುಕತೆಗಳಲ್ಲಿ, ಕಂಪನಿಯು ಸೂಕ್ತವೆಂದು ಪರಿಗಣಿಸುವ ಮತ್ತು ಕಾನೂನಿನ ಅಡಿ ಅನುಮತಿಸಲಾಗಿರುವಷ್ಟು ಗೌಪ್ಯತೆ ಕಾಪಾಡಿಕೊಳ್ಳುವ ಬಲವಾದ ಇಚ್ಛೆ ಹೊಂದಿದೆ (ಮೌಖಿಕ ರೂಪದ ಅಥವಾ ಬರಹದಲ್ಲಿರುವ, ಎಲೆಕ್ಟ್ರಾನಿಕ್ ಅಥವಾ ಇನ್ನ್ಯಾವುದೇ ಸ್ವರೂಪದ ಮಾತುಕತೆಯೇ ಆಗಿರಲಿ). ಇದು ಕಾನೂನು ಸವಲತ್ತು ಅಥವಾ ಇತರ ವಿನಾಯಿತಿ ಒಳಪಟ್ಟಿರುವ ಮಾತುಕತೆಗಳ ಮೇಲಿನ ಗೌಪ್ಯತೆಯನ್ನು ಒಳಗೊಂಡಿರುತ್ತದೆ (ಆದ್ದರಿಂದ, ಕಾನೂನು ಪ್ರಕ್ರಿಯೆಗಳಲ್ಲು ಇವು ಬಹಿರಂಗ ಆಗದಿರುವಂತೆ ರಕ್ಷಿಸಲಾಗುತ್ತದೆ). ತನಿಖೆಗೆ ಸಂಬಂಧಿಸಿದ ಮಾತುಕತೆಗಳ ವಿಷಯಕ್ಕೆ ಬಂದಾಗ ತನಿಖೆಯ ಭಾಗವಾಗಿರುವ ಎಲ್ಲಾ ವ್ಯಕ್ತಿಗಳು ಗೌಪ್ಯತೆ ಮತ್ತು ಸವಲತ್ತುಗಳನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಮ್ಯಾಗ್ನ ನಿರೀಕ್ಷಿಸುತ್ತದೆ.

ಕಂಪನಿಯ ಪರವಾಗಿ ಮಾತನಾಡಲು ಮ್ಯಾಗ್ನದಿಂದ ನಿರ್ದಿಷ್ಟ ಅಧಿಕಾರ ಪಡೆದಿರುವ ಉದ್ಯೋಗಿ ಅಥವಾ ಏಜೆಂಟರು ಮಾತ್ರ ತನಿಖಾ ಪ್ರಕ್ರಿಯೆಯ ಬಗ್ಗೆ ಮೂರನೇ ವ್ಯಕ್ತಿಗಳೊಂದಿಗೆ ಮಾತುಕತೆ ನಡೆಸಬಹುದು. ಈ ನೀತಿ ಉದ್ಯೋಗಿಗಳು ವೈಯಕ್ತಿಕ ಸಾಮರ್ಥ್ಯದಲ್ಲಿ ಸರ್ಕಾರಿ ಅಥವಾ ನಿಯಂತ್ರಕ ಏಜೆನ್ಸಿಗಳೊಂದಿಗೆ ಮಾತನಾಡುವುದನ್ನು ತಡೆಯುವುದಿಲ್ಲ.

## ಮೇಲ್ವಿಚಾರಣೆ ಮತ್ತು ವರದಿ

ಮ್ಯಾಗ್ನ ಅನುಸರಣೆ ಮಂಡಳಿ ("MCC") ನೈತಿಕತೆ ಮತ್ತು ಕಾನೂನು ಅನುಸರಣೆ ಕಾರ್ಯಕ್ರಮದ ಎಲ್ಲಾ ಅಂಶಗಳ ಮೇಲ್ವಿಚಾರಣೆ ಮಾಡುತ್ತದೆ. MCCಯು ನೈತಿಕತೆ ಮತ್ತು ಕಾನೂನು ಅನುಸರಣೆ ತನಿಖೆಗಳ ಮೇಲ್ವಿಚಾರಣೆಯನ್ನು ತನಿಖಾ ಉಸ್ತುವಾರಿ ಸಮಿತಿಗೆ ("IOC"ಗೆ) ವಹಿಸಿದೆ. IOCಯು ಮೂರು ತಿಂಗಳಿಗೊಮ್ಮೆ ಭೇಟಿ ಮಾಡಿ, MCCಗೆ ವರದಿ ಸಲ್ಲಿಕೆ ಮಾಡುವ ಮ್ಯಾಗ್ನ ನಾಯಕರನ್ನು ಒಳಗೊಂಡಿದೆ. ಮೀಸಲಾದ ತನಿಖಾ ನಿರ್ವಾಹಕರ ("ನಿರ್ವಾಹಕರ") ಬೆಂಬಲದೊಂದಿಗೆ IOC, ಈ ನೀತಿ ಮತ್ತು ಯಾವುದೇ ಸಂಬಂಧಿತ ಕಾರ್ಯವಿಧಾನಗಳ ಅಥವಾ ಮಾರ್ಗಸೂಚಿಗಳಿಗೆ ಅನುಗುಣವಾಗಿ ಎಲ್ಲಾ ಅನ್ವಯವಾಗುವ ಆಂತರಿಕ ತನಿಖೆಗಳ ಸಮಯೋಚಿತ, ನ್ಯಾಯೋಚಿತ ಮತ್ತು ಸ್ಥಿರವಾದ ಜಾರಿಯನ್ನು, ಪರಿಹಾರ ಮತ್ತು ಆಂತರಿಕ ವರದಿ ಪ್ರಕ್ರಿಯೆಯ ನಿರ್ವಹಣೆ ಮತ್ತು ಮೇಲ್ವಿಚಾರಣೆಯನ್ನು ಮಾಡುತ್ತದೆ.

ಹೆಚ್ಚಿನ ಅಪಾಯದ ತನಿಖೆಗಳಿಗೆ ಸಂಬಂಧಿಸಿದ ಅಂಕಿಅಂಶಗಳು ಮತ್ತು ಮಾಹಿತಿಯನ್ನು ಮ್ಯಾಗ್ನಾ ಇಂಟರ್‌ನ್ಯಾಶನಲ್ ಇಂಕ್‌ನ ಆಂತರಿಕ ಲೆಕ್ಕಪರಿಶೋಧನೆಯ ಮೂಲಕ ನಿಯಮಿತವಾಗಿ ನಿರ್ದೇಶಕರ ಮಂಡಳಿಯ ಆಡಿಟ್ ಸಮಿತಿಗೆ ವರದಿ ಮಾಡಲಾಗುತ್ತದೆ.

## ಕಾರ್ಯಾಚರಣೆ (ಪ್ರಕರಣ ಸ್ವೀಕೃತಿ)

ಮ್ಯಾಗ್ನ ಹಾಟ್‌ಲೈನ್ ಮೂಲಕ ಸಲ್ಲಿಸಲಾದ ವರದಿಗಳನ್ನು ಸ್ವತಂತ್ರ ಮೂರನೇ ವ್ಯಕ್ತಿಯಿಂದ ಸ್ವೀಕರಿಸಲಾದ ನಂತರ ನಿರ್ವಾಹಕರಿಗೆ ರವಾನಿಸಲಾಗುತ್ತದೆ (ಅವರು ಪ್ರಕರಣ ದಾಖಲಾತಿ ಮತ್ತು ತನಿಖೆ ಪ್ರಕ್ರಿಯೆಯನ್ನು ಆರಂಭಿಸುತ್ತಾರೆ). ಮೂರನೇ ವ್ಯಕ್ತಿ ಕೇಂದ್ರೀಯ ಡೇಟಾಬೇಸ್‌ನಲ್ಲಿ ಆರೋಪಗಳನ್ನು ದಾಖಲಿಸುವ ಮೂಲಕ ಈ ನೀತಿಯಲ್ಲಿ ವಿವರಿಸಲಾದ ಪ್ರತಿಕ್ರಿಯೆ ಪ್ರಕ್ರಿಯೆಯನ್ನು ಆರಂಭಿಸುತ್ತಾರೆ. ಮೂರನೇ ವ್ಯಕ್ತಿಯ ಸಿಬ್ಬಂದಿ ವರ್ಗ ದಿನದ 24 ಗಂಟೆ, ವರ್ಷದ 365 ದಿನಗಳು ಲಭ್ಯವಿರುತ್ತಾರೆ ಮತ್ತು 20 ಭಾಷೆಗಳಲ್ಲಿ ಮಾತುಕತೆ ನಡೆಸುತ್ತಾರೆ.

---

[2] ಕೆಲವು ನ್ಯಾಯವ್ಯಾಪ್ತಿಗಳು ಹೆಸರನ್ನು ತಿಳಿಸದೆ ವರದಿ ಮಾಡುವ ವ್ಯವಸ್ಥೆಗಳ ಮೇಲೆ ಮಿತಿಗಳನ್ನು ಹೊಂದಿರಬಹುದು. ಮ್ಯಾಗ್ನ ಹಾಟ್‌ಲೈನ್ ವ್ಯವಸ್ಥೆಯಲ್ಲಿ ಹೆಸರನ್ನು ತಿಳಿಸದೆ ವರದಿ ಮಾಡುವ ವಿಧಾನದ ಬಗ್ಗೆ ಅಥವಾ ಮ್ಯಾಗ್ನ ಹಾಟ್‌ಲೈನ್ ಕರೆಗಳನ್ನು ಹೀಗೆ ಅನಾಮಧೇಯವಾಗಿಡಲು ಮ್ಯಾಗ್ನದ ಬಾಧ್ಯತೆಯ ಬಗ್ಗೆ ಇರುವ ಪ್ರಶ್ನೆಗಳನ್ನು ಗುಂಪು ಮತ್ತು/ಅಥವಾ ಸಂಬಂಧಿತ ಪ್ರದೇಶದಲ್ಲಿನ ಕಾನೂನು ಸಲಹೆಗಾರರಿಗೆ ರವಾನಿಸಬೇಕು. ಮ್ಯಾಗ್ನ ಹೊರತುಪಡಿಸಿ, ಅದರ ಹೊರಗಿನ ಪಾರ್ಟಿಗಳು ತಮ್ಮನ್ನು ತಾವು ಅಗತ್ಯವಾಗಿ ಗುರುತಿಸಿಕೊಳ್ಳಬೇಕಾಗಿದೆ.

ಇತರ ದಾರಿಗಳಲ್ಲಿ ಸಲ್ಲಿಸಲಾದ ವರದಿಗಳನ್ನು ನಿರ್ವಾಹಕರಿಗೆ ಸಕಾಲದಲ್ಲಿ ರವಾನಿಸಬೇಕು, ಅವರು ಆರೋಪಗಳನ್ನು ದಾಖಲಿಸುವ ಮೂಲಕ ಈ ನೀತಿಯಲ್ಲಿ ವಿವರಿಸಿದ ತನಿಖೆ ಪ್ರಕ್ರಿಯೆಯನ್ನು ಆರಂಭಿಸುತ್ತಾರೆ.

## ಅತ್ಯುತ್ತಮ ತನಿಖೆ ಅಭ್ಯಾಸಗಳು

ಆಂತರಿಕ ಲೆಕ್ಕಪರಿಶೋಧನೆ, ಕಾರ್ಪೊರೇಟ್ ಭದ್ರತೆ, ಕಾನೂನು, ಕಾರ್ಯಾಚರಣೆ ಅಥವಾ ವರದಿಗೆ ಸಂಬಂಧಪಟ್ಟ ಕಾರ್ಯಾಚರಣ ಗುಂಪು ಸೇರಿದಂತೆ ಮ್ಯಾಗ್ನದಲ್ಲಿರುವ ಕ್ರಿಯಾತ್ಮಕ ವಿಭಾಗಗಳ ಅನುಭವಿ ಸದಸ್ಯರು ತನಿಖೆಗಳನ್ನು ನಡೆಸುತ್ತಾರೆ. ತನಿಖೆಯನ್ನು ಮುನ್ನಡೆಸಲು ನಿಯೋಜಿಸಲಾದ ಕ್ರಿಯಾತ್ಮಕ ವಿಭಾಗವು ("ಲೀಡ್") ವರದಿಯ ವಿಷಯದ ಮೇಲೆ ಮತ್ತು ನಿರ್ವಾಹಕರು ಪ್ರಕರಣದ ಪ್ರಾಥಮಿಕ ಹಂತದ ಮೌಲ್ಯಮಾಪನ ಹಾಗೂ ವಿಚಾರಣೆ ಸಮಯದ ಮೌಲ್ಯಮಾಪನದಲ್ಲಿ ಮಾಡಿದ ಆರೋಪಗಳ ತೀವ್ರತೆಯನ್ನು ಅವಲಂಬಿಸಿರುತ್ತದೆ.ಮ್ಯಾಗ್ನಾ ತನಿಖಾ ಪ್ರಕ್ರಿಯೆಯನ್ನು ಬೆಂಬಲಿಸಲು ಬಾಹ್ಯ ಸಂಪನ್ಮೂಲಗಳನ್ನು (ಉದಾಹರಣೆಗೆ, ಬಾಹ್ಯ ಕಾನೂನು ಸಲಹೆಗಾರ) ಬಳಸಬಹುದು.

ಯೋಜನೆಯಂತೆ ತನಿಖೆ ಮಾಡಲು, ಎಲ್ಲಾ ತನಿಖಾ ಕ್ರಮಗಳನ್ನು ಕೈಗೊಳ್ಳಲು ಮತ್ತು ಆಂತರಿಕ ವರದಿ ನೀಡಲು ಲೀಡ್‌ಗಳು ಜವಾಬ್ದಾರರಾಗಿರುತ್ತಾರೆ. ತನಿಖಾ ಕ್ರಮಗಳ ಸಮರ್ಪಕತೆ ಮತ್ತು ಸಕಾಲಿಕ ಜಾರಿಯನ್ನು ನಿರ್ವಾಹಕರು ಮೇಲ್ವಿಚಾರಣೆ ಮಾಡುತ್ತಾರೆ. ಕಾಲಕಾಲಕ್ಕೆ, IOC ಈ ನೀತಿಗೆ ಅನುಗುಣವಾಗಿ ತನಿಖೆಗಳನ್ನು ಕೈಗೊಳ್ಳಲು ಉತ್ತಮ ಅಭ್ಯಾಸಗಳ ಮಾರ್ಗಸೂಚಿಗಳನ್ನು ಹೊಂದಬಹುದು.

ತನಿಖೆಗಳನ್ನು ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸುವುದು ಹಾಗೂ ಅವುಗಳ ಸ್ಥಿತಿ ಮತ್ತು ಅವುಗಳಿಂದ ತಿಳಿದು ಬಂದ ವಿಷಯಗಳ ಕುರಿತಾಗಿ ಆಂತರಿಕ ವರದಿ ನೀಡುವುದು ಸಮರ್ಥನೀಯ ಆರೋಪಗಳನ್ನು ನಿವಾರಿಸಲು ಅಗತ್ಯವಿರುವ ಕ್ರಮಗಳು ಯಾವುದಾದರೂ ಇದ್ದರೆ ಅವನ್ನು ನಿರ್ಧರಿಸಲು ಮ್ಯಾನೇಜ್ಮೆಂಟ್‌ಗೆ ಅನುಕೂಲವಾಗುತ್ತದೆ. ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿಯ ಪ್ರವೇಶವನ್ನು ಗೊತ್ತುಮಾಡಿದ ಮ್ಯಾಗ್ನ ಸಿಬ್ಬಂದಿಗೆ ಸೀಮಿತಗೊಳಿಸಲಾಗಿದೆ.

ತನಿಖಾ ಪ್ರಕ್ರಿಯೆಯ ಉದ್ದಕ್ಕೂ ವರದಿಗಾರರೊಂದಿಗೆ ನಿರಂತರ ಸಂಪರ್ಕ ಇರುತ್ತದೆ. ಆರೋಪಗಳನ್ನು ಸಾಬೀತುಪಡಿಸಲು ಹೆಚ್ಚುವರಿ ಮಾಹಿತಿ ಅಥವಾ ಪುರಾವೆಗಳನ್ನು ಕೋರಲು ಲೀಡ್ಸ್ ವರದಿಗಾರರನ್ನು ಸಂಪರ್ಕಿಸಬಹುದು. ವರದಿಗಾರರಿಗು ತನಿಖೆಯ ಸ್ಥಿತಿ ಮತ್ತು ತನಿಖೆಯನ್ನು ಯಾವಾಗ ಮುಕ್ತಾಯಗೊಳಿಸಲಾಗುತ್ತದೆ ಎಂಬುದರ ಕುರಿತು ಸಮಯೋಚಿತವಾಗಿ ತಿಳಿಸಲಾಗುತ್ತದೆ.

## ಪರಿಹಾರ ಕ್ರಮ

ಆರೋಪಗಳು ಸಾಬೀತಾದರೆ (ಸಂಪೂರ್ಣವಾಗಿ ಅಥವಾ ಭಾಗಶಃ), ನಡವಳಿಕೆಗೆ ಪರಿಹಾರಗಳನ್ನು ಸೂಚಿಸುವ ಮತ್ತು ಭವಿಷ್ಯದಲ್ಲಿ ಇದೇ ರೀತಿಯ ನಡವಳಿಕೆ ಆಗದಂತೆ ತಡೆಗಟ್ಟುವ ದಾರಿಯನ್ನು ನಿರ್ಧರಿಸುವ ಮತ್ತು ಅದನ್ನು ಅನುಷ್ಠಾನಕ್ಕೆ ತರುವ ಜವಾಬ್ದಾರಿ ಮ್ಯಾಗ್ನ ಮ್ಯಾನೇಜ್ಮೆಂಟ್ ಮೇಲಿರುತ್ತದೆ. ಅನುಚಿತ ನಡವಳಿಕೆಯನ್ನು ನಿಲ್ಲಿಸುವುದು ಮತ್ತು ಭವಿಷ್ಯದಲ್ಲಿ ಅದು ಮತ್ತೊಮ್ಮೆ ಆಗದಂತೆ ತಡೆಯುವುದು ಪರಿಹಾರ ಕ್ರಮದ ಉದ್ದೇಶವಾಗಿದೆ. ಪರಿಹಾರ ಕ್ರಮಗಳು ಕೆಳಗಿನವುಗಳನ್ನು ಒಳಗೊಂಡಿರಬಹುದು (ಮಿತಿಯಿಲ್ಲದೆ):

- ಆಂತರಿಕ ನಿಯಂತ್ರಣಗಳನ್ನು ಅನುಷ್ಠಾನಗೊಳಿಸುವುದು, ಹೆಚ್ಚಿಸುವುದು ಅಥವಾ ನಿರ್ವಹಣೆ ಮಾಡುವುದು;
- ಉದ್ಯೋಗಿಯನ್ನು ಶಿಸ್ತಿನ ಹಾದಿಗೆ ತರುವುದು, ಅಮಾನತುಗೊಳಿಸುವುದು ಅಥವಾ ವಜಾಗೊಳಿಸುವುದು;
- ಮಾರಾಟಗಾರರೊಂದಿಗೆ ಸಂಬಂಧವನ್ನು ಕೊನೆಗೊಳಿಸುವುದು;
- ಸಿಬ್ಬಂದಿ ತರಬೇತಿ (ಅಥವಾ ಮರು-ತರಬೇತಿ);
- ಕಾನೂನು ಜಾರಿ ಸಂಸ್ಥೆಗೆ ವರದಿ ಮಾಡುವುದು; ಅಥವಾ
- ಹಾನಿಗಾಗಿ ಮೊಕದ್ದಮೆಯನ್ನು ಆರಂಭಿಸುವುದು.

## ಮ್ಯಾನೇಜ್ಮೆಂಟ್ ಜವಾಬ್ದಾರಿಗಳು

ಮ್ಯಾಗ್ನ ಮ್ಯಾನೇಜ್ಮೆಂಟ್ ಸದಸ್ಯರು, ಉದ್ಯೋಗಿಗಳಂತೆ, ಮೇಲೆ ತಿಳಿಸಲಾದ ವಿವಿಧ ವರದಿ ಮಾಡುವ ದಾರಿಗಳಲ್ಲಿ ಒಂದನ್ನು ಆರಿಸಿಕೊಂಡು ಎಲ್ಲಾ ಶಂಕಿತ ದುರ್ನಡತೆ ಘಟನೆಗಳನ್ನು ತ್ವರಿತವಾಗಿ ವರದಿ ಮಾಡುವುದನ್ನು ನಿರೀಕ್ಷಿಸಲಾಗಿದೆ.

ಸಾಧ್ಯವಾದಾಗಲೆಲ್ಲಾ, ತನಿಖೆಯ ಪ್ರಗತಿಯ ಬಗ್ಗೆ ಮ್ಯಾನೇಜ್ಮೆಂಟ್‌ಗೆ ನಿಯಮಿತವಾಗಿ ತಿಳಿಸಲಾಗುತ್ತದೆ. ಆದಾಗ್ಯೂ, ತನಿಖೆಯಲ್ಲಿ ನೇರವಾಗಿ ಭಾಗಿಯಾಗಿರುವ ಯಾವುದೇ ಸಿಬ್ಬಂದಿ ಪ್ರಕರಣದ ವಿವರಗಳನ್ನು ಪಡೆದುಕೊಳ್ಳದಂತೆ ನಿರ್ಬಂಧಿಸಲಾಗುತ್ತದೆ.

ಯಾವುದೇ ತನಿಖೆ ಪೂರ್ಣಗೊಂಡ ನಂತರ, ನಿರ್ದಿಷ್ಟವಾಗಿ ಉದ್ಯೋಗಿಯ ಮೇಲೆ ಶಿಸ್ತು ಕ್ರಮ ಜರುಗಿಸಬೇಕಾದ ಅಥವಾ ಹಣಕಾಸಿನ ನಷ್ಟಗಳನ್ನು ಮರುಪಡೆದುಕೊಳ್ಳಲು ಶಿಫಾರಸು ಬಂದ ಸಂದರ್ಭಗಳಲ್ಲಿ ಅಥವಾ ಆಂತರಿಕ ನೀತಿ, ಕಾರ್ಯವಿಧಾನ, ಅಥವಾ ಇತರ ನಿಯಂತ್ರಣಗಳನ್ನು ತಿದ್ದಬೇಕಾದ ಅಥವಾ ಬದಲಿಸಬೇಕಾಗುವ ಸಂದರ್ಭಗಳಲ್ಲಿ, ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಅನುಮತಿಸಲು "ತಿಳಿದುಕೊಳ್ಳಬೇಕಾದ" ಸತ್ಯಗಳ ಬಗ್ಗೆ ಮ್ಯಾನೇಜ್ಮೆಂಟ್‌ಗೆ ಸಲಹೆ ನೀಡಲಾಗುತ್ತದೆ.

## ಹೆಚ್ಚಿನ ಮಾಹಿತಿಗಾಗಿ

ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ಉಪಾಧ್ಯಕ್ಷರು, ನೈತಿಕತೆ ಮತ್ತು ಮುಖ್ಯ ಅನುಸರಣೆ ಅಧಿಕಾರಿ ಅಥವಾ ಆಂತರಿಕ ಆಡಿಟ್ ಉಪಾಧ್ಯಕ್ಷರನ್ನು ಸಂಪರ್ಕಿಸಿ.

---

| | |
|---|---|
| Issued: | September 21, 2021 |
| Revised: | April 3, 2024/ |
| Next Review: | Q13 20274 |
| Issued By: | Ethics & Legal Compliance |
| Approved By: | Magna Compliance Coun |